# ಹೇಳಿಕೆ

ಕೆಳಗೆ ಸಹಿಮಾಡಿದ ನಾವು 11 ಜನ ಪ್ರಮುಖ ನಾಗರೀಕರ ಆರೋಗ್ಯದ ಬಗ್ಗೆ ತೀವ್ರ ಆತಂಕಿತರಾಗಿದ್ದೇವೆ.

1. ಶ್ರೀ ವರವರರಾವ್
2. ಶ್ರೀಮತಿ ಸುಧಾ ಭಾರದ್ವಾಜ
3. ಶ್ರೀಮತಿ ಶೋಮಾಸೇನ್
4. ಶ್ರೀ ಆನಂದ್ ತೇಲ್‌ತುಂಬ್ಡೆ
5. ಶ್ರೀ ಗೌತಮ್ ನೌಲಖಾ
6. ಶ್ರೀ ಅರುಣ್ ಫೆರೀರಾ
7. ಶ್ರೀ ವೆರ್ನ್‌ನ್ ಗೋನ್ಸಾಲ್ವೇಸ್
8. ಶ್ರೀ ಸುರೇಂದ್ರ ಗಾಡ್‌ಲಿಂಗ್
9. ಶ್ರೀ ಮಹೇಶ್ ರಾವುತ್
10. ಶ್ರೀ ಸುಂದರ್ ಧವಳೆ
11. ಶ್ರೀ ರೋನಾ ವಿಲ್ಸನ್

ಈ 11 ಜನ ಮಾನವ ಹಕ್ಕು ಹೋರಾಟಗಾರರು ಮತ್ತು ಕ್ರಿಯಾಶೀಲರು, ಅವರಲ್ಲಿ ಅನೇಕರು ಶ್ರೇಷ್ಠ ವಿದ್ವಾಂಸರು, ಬರಹಗಾರರು ಮತ್ತು ಕವಿಗಳು ಆಗಿದ್ದಾರೆ. ಇವರು ಅನೇಕ ದಶಕಗಳಿಂದ ಭಾರತದ ಕಡುಬಡವರ ಹಾಗೂ ಅಂಚಿಗೆ ತಳ್ಳಲ್ಪಟ್ಟ ಜನರ ಕಲ್ಯಾಣಕ್ಕಾಗಿ ದುಡಿಯುತ್ತ ಬಂದಿದ್ದಾರೆ. ಈ ಮಾನವ ಹಕ್ಕು ಪ್ರತಿಪಾದಕರನ್ನು ರಾಜಕೀಯ ಕೈದಿಗಳನ್ನಾಗಿ ಮಾಡಿ ಭಾರತದ ವಿವಿಧ ಜೈಲುಗಳಲ್ಲಿ ಬಂಧಿಸಿಡಲಾಗಿದೆ. ಮಹಾರಾಷ್ಟ್ರದ ಜೈಲಿನಲ್ಲಿ ಇವರನ್ನು ಬಂಧಿಸಿಡಲಾಗಿದೆ. ಆ ಜೈಲಿನಲ್ಲಿರುವ ಅನೇಕ ಕೈದಿಗಳು ಸಾವಿಗೀಡಾಗಿದ್ದು ಇನ್ನೂ ಅನೇಕರಿಗೆ ಕೋವಿಡ್–19ರ ಸೋಂಕು ತಗುಲಿದ್ದು ದೃಢವಾಗಿದೆ. ಆಸಾಮ್‌ನಲ್ಲಿ ಪ್ರಭುತ್ವವು ಮಾಡುತ್ತ ಬಂದಿರುವ ಮಾನವ ಹಕ್ಕುಗಳ ಉಲ್ಲಂಘನೆಗಳ ವಿರುದ್ಧ ಮತ್ತೆ ಮತ್ತೆ ದನಿಯೆತ್ತಿದ ಅಖಿಲ್ ಗೋಗೋಯ್ ಅವರಿಗೆ ಕೂಡ ಬೇಲ್ ಕೊಡಲಾಗಿಲ್ಲ. ಅನೇಕ ಜೈಲುಗಳಲ್ಲಿ ಕೋವಿಡ್–19ರ ಪ್ರಕರಣಗಳು ಆತಂಕಕಾರಿಯಾಗಿ ಹೆಚ್ಚಾಗಿದ್ದು ಇಂಥ ಪರಿಸ್ಥಿತಿಯಲ್ಲಿ ಇಂಥ ಪ್ರಮುಖ ಮಾನವ ಹಕ್ಕು ಹೋರಾಟಗಾರರನ್ನು ಬಂಧಿಸಿಡಬೇಕೆನ್ನುವ ಒತ್ತಾಯದಿಂದ ನಾವು ತುಂಬಾ ಆತಂಕಿತರಾಗಿದ್ದೇವೆ. ಇದು ಅವರ ಆರೋಗ್ಯ, ಸುರಕ್ಷತೆ ಮತ್ತು ಕ್ಷೇಮಗಳಿಗೆ ನಿಜವಾಗಿ ಅಪಾಯಕಾರಿಯಾಗಿದೆ. ಈ ಹೋರಾಟಗಾರರು ಅಪರಾಧಿಗಳಲ್ಲ ಮತ್ತು ಕಾನೂನಿಂದ ತಪ್ಪಿಸಿಕೊಳ್ಳಲು ದೇಶವನ್ನು ಬಿಟ್ಟು ಓಡಿಹೋಗುವ ಯಾವ ಉದ್ದೇಶವೂ ಅವರಿಗಿಲ್ಲ. ಇಡೀ ದೇಶದಲ್ಲಿ ಮಾರಕವಾದ

ಜಾಗತಿಕ ಸಾಂಕ್ರಾಮಿಕ ರೋಗವು ಹಬ್ಬಿದ್ದು, ಇವರ ಜೀವಕ್ಕೆ ಅಪಾಯವಿರುವುದರಿಂದ ಮಾನವೀಯ ಆಧಾರದ ಮೇಲೆ ಅವರುಗಳಿಗೆ ತಕ್ಷಣವೇ ಜಾಮೀನು(bail) ನೀಡಬೇಕೆಂದು ನಾವು ಒತ್ತಾಯಿಸುತ್ತಿದ್ದೇವೆ.

ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯಾಗಿರುವ ಸಫೂರಾ ಜರ್ಗಾರ್ ಗರ್ಭಿಣಿಯಾಗಿದ್ದು ಅವಳನ್ನು CAA ವಿರೋಧದಲ್ಲಿ ಭಾಗಿಯಾಗಿದ್ದರಿಂದ ಬಂಧಿಸಲಾಗಿದೆ. ಅವಳಿಗೆ ಬೇಲ್ ನಿರಾಕರಿಸಲಾಗಿದ್ದು ಇದರಿಂದಾಗಿ ಅವಳ ಮತ್ತು ಇನ್ನೂ ಹುಟ್ಟದಿರುವ ಅವಳ ಮಗುವಿನ ಜೀವಗಳಿಗೆ ಅಪಾಯವಿರುವುದು ಅತ್ಯಂತ ಆಘಾತಕರವಾಗಿದೆ. ಈ ಮೇಲ್ಕಂಡ 11 ಜನ ಹೋರಾಟಗಾರರ ಜೊತೆಗೆ ಅವಳಿಗೆ ಕೂಡ ಬೇಲ್ ನೀಡಬೇಕೆಂದು ನಾವು ಒತ್ತಾಯಿಸುತ್ತೇವೆ. ಜೆ.ಎನ್.ಯು, ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯಗಳು ಸೇರಿದಂತೆ CAA, NPR ಮತ್ತು NRC ವಿರುದ್ಧ ದೆಹಲಿಯಲ್ಲಿ ಪ್ರಜಾಪ್ರಭುತ್ವವಾದಿ, ಶಾಂತಿಯುತ ಪ್ರತಿಭಟನೆಗಳ ನೇತೃತ್ವವನ್ನು ವಹಿಸಿದ್ದ ಯುವ ವಿದ್ಯಾರ್ಥಿನಾಯಕರನ್ನು ಕ್ರಿಮಿನಲ್ ಪ್ರಕರಣಗಳಲ್ಲಿ ಸೇರಿಸಿ ಕೋವಿಡ್ ಲಾಕ್‌ಡೌನ್‌ನ ಸಂದರ್ಭದಲ್ಲಿ ಜೈಲುಗಳಲ್ಲಿ ಬಂಧಿಸಿಡಲಾಗಿದೆ. 80 ವರ್ಷ ವಯಸ್ಸಿನ ಶ್ರೀ ವರವರರಾವ್ ಅವರು ಈಗಾಗಲೇ ಅನಾರೋಗ್ಯದಿಂದ ಬಳಲುತ್ತಿದ್ದು ಅವರನ್ನು ಒಂದು ಪೋಲೀಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆಯೆಂದು ನಮಗೆ ತಿಳಿದುಬಂದಿದೆ. ಕೋವಿಡ್-19 ವೈರಾಣುವು "ಜೈಲುಗಳಲ್ಲಿ ಭೀಕರವಾಗಿ ಹಬ್ಬುತ್ತಿದೆ" ಎಂದು ವಿಶ್ವಸಂಸ್ಥೆಯ ಮಾನವ ಹಕ್ಕು ಆಯೋಗದ ಮುಖ್ಯಸ್ಥರು ತಮ್ಮ ಭಯವನ್ನು ವ್ಯಕ್ತಪಡಿಸಿದ್ದಾರೆ ಹಾಗೂ ಅಮೇರಿಕನ್ ಬಾರ್ ಅಸೋಸಿಯೇಶನ್-ಮಾನವ ಹಕ್ಕುಗಳ ಕೇಂದ್ರಗಳು ಭಾರತದ ವಿವಿಧ ಜೈಲುಗಳಲ್ಲಿ ಬಂಧನದಲ್ಲಿರುವ ಮಾನವಹಕ್ಕು ಹೋರಾಟಗಾರರನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಭಾರತ ಸರ್ಕಾರಕ್ಕೆ ಕರೆ ನೀಡಿವೆ.

ಇಂದಿನ ಸಂದರ್ಭದಲ್ಲಿ ನಮ್ಮ ಗಮನವು ಪ್ರತಿರೋಧವನ್ನು ಹತ್ತಿಕ್ಕುವುದರ ಮೇಲಲ್ಲ, ಜೈಲುಗಳಲ್ಲಿ ಮತ್ತು ಅವುಗಳ ಹೊರಗೆ ಕೋವಿಡ್ ಪಿಡುಗನ್ನು ತಡೆಯುವವರ ಮೇಲಿರಬೇಕು.

ಕೋವಿಡ್-19 ಪಿಡುಗು ಅವರ ಆರೋಗ್ಯವನ್ನು ನಾಶಮಾಡಲು ಕಾಯುತ್ತಿರುವ ಜೈಲುಗಳಲ್ಲಿ ಇಂಥ ಪ್ರಮುಖ ಸಾಮಾಜಿಕ ಕಾರ್ಯಕರ್ತರನ್ನು, ಕ್ರಿಯಾಶೀಲರನ್ನು ಹಾಗೂ ಭಾರತದ ಏಳ್ಗೆಗಾಗಿ ನಿಸ್ವಾರ್ಥವಾಗಿ ದುಡಿಯುತ್ತಿದ್ದ ವಿದ್ಯಾರ್ಥಿಗಳನ್ನು ಉದ್ದೇಶಪೂರ್ವಕವಾಗಿ ಅಂಥ ಜೈಲುಗಳಲ್ಲಿ ಬಂಧಿಸಿಟ್ಟರೆ, ಈ ವ್ಯಕ್ತಿಗಳ ಮೇಲೆ ಕೋವಿಡ್-19ರ ಪಿಡುಗಿನಿಂದ ಅವರ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮವು ಉಂಟಾದರೆ ಅದಕ್ಕೆ ಸರಕಾರವೇ ಸಂಪೂರ್ಣವಾಗಿ ಹೊಣೆಯಾಗಿರುತ್ತದೆ. ಸರಕಾರವು ದಮನಿತರ ಪರವಾಗಿರುವ ಹಾಗೂ ಪ್ರಜಾಪ್ರಭುತ್ವವಾದಿ ವ್ಯಕ್ತಿಗಳನ್ನು ಹೇಗೆ ನಡೆಸಿಕೊಳ್ಳುತ್ತದೆಯೆನ್ನುವುದನ್ನು ನಮ್ಮ ಜೊತೆಗೆ ಇಡೀ ವಿಶ್ವವೇ ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ಈ ಬಂಧಿತರನ್ನು ಈ ಕೂಡಲೇ ಬೇಲ್ ಮೇಲೆ ಬಿಡುಗಡೆಮಾಡಬೇಕು. ನಾವು ಇದು ಆಗಲೇಬೇಕೆಂದು ಆಗ್ರಹಿಸುತ್ತೇವೆ.

- ರಾಜೇಂದ್ರ ಚೆನ್ನಿ